ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 194-198
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗಂಜೀಫಾ ಕಲೆ ಮತ್ತು ಜಾಗತೀಕರಣ

**ಡಾ.ಜಿ.ಕೆ. ಕರಿಯಮ್ಮ**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗುಡಿ, ಬೆಂಗಳೂರು.

**Abstract:**
*ಗಂಜೀಫಾ ಕರ್ನಾಟಕದ ಮೈಸೂರಿನ ಪ್ರಸಿದ್ಧ ಜಾನಪದ ಕಲೆ. ಈ ಜಾನಪದ ಕಲೆಯು ವಾಸ್ತವವಾಗಿ ಪ್ರಾಚೀನ ಕಾರ್ಡ್ ಆಟದಿಂದ ಪ್ರೇರಿತವಾಗಿದೆ. ಈ ಆಟವನ್ನು ಮೊಘಲ್ ಅವಧಿಯಲ್ಲಿ ಜನಪ್ರಿಯಗೊಳಿಸಲಾಯಿತು. ಗಂಜೀಫಾ ಕಲೆಯು ಮೊಘಲರ ಕಾಲದಲ್ಲಿ ಇರಾನ್ ದೇಶದಿಂದ ನಮ್ಮ ಭಾರತಕ್ಕೆ ಬಂದ ಕಲೆ. ಹಾಗೆ ಬಂದ ಪರ್ಷಿಯನ್ನರ ಈ ಕಲೆ ಈಗ ಭಾರತೀಯ ಕಲೆಯೇ ಆಗಿಬಿಟ್ಟಿದೆ. ಮೈಸೂರು ಶೈಲಿಯ ಗಂಜೀಫಾ ಕಲೆ, ಆಟಗಳ ಶ್ರೇಯಸ್ಸು, ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸೇರಬೇಕು. ಮುಮ್ಮಡಿಯವರನ್ನು ಒಳಗೊಂಡಂತೆ ಮೈಸೂರಿನ ಅರಸು ಮನೆತನದವರು ಸಾಹಿತ್ಯ, ಚಿತ್ರಕಲೆ, ನೃತ್ಯ, ಕ್ರೀಡೆ ಎಲ್ಲವನ್ನೂ ಸೇರಿದಂತೆ ಅನೇಕ ಕಲಾಪ್ರಕಾರಗಳ ಉನ್ನತಿಗೆ ಕಾರಣರಾಗಿದ್ದಾರೆ. ಮಹಾಭಾರತ, ರಾಮಾಯಣ ಮತ್ತು ಇತರ ಮಹಾಕಾವ್ಯಗಳ ಪ್ರಸಿದ್ಧ ಕಥೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಗಂಜೀಫಾ ಆಟವನ್ನು ರಾಜಮನೆತನದವರು ಆಡುತ್ತಿದ್ದರು. ಈ ಪ್ರಸಿದ್ಧ ಕಥೆಗಳನ್ನು ಚಿತ್ರಗಳ ಮೂಲಕ ಕಾರ್ಡ್ ಮೇಲೆ ಕೈಯಿಂದ ಚಿತ್ರಿಸಲಾಗುತ್ತಿತ್ತು. ರಾಜ ಮನೆತನದವರು ಮಾತ್ರ ಆಡುತ್ತಿದ್ದ ಈ ಆಟ ಕ್ರಮೇಣ ಎಲ್ಲೆಡೆ ಪ್ರಸಿದ್ಧಿ ಪಡೆಯಿತು. ಆದರೆ ಇಂತಹ ಜಾನಪದ ಕಲೆ ಜಾಗತೀಕರಣದ ಪ್ರಭಾವದಿಂದ ನೇಪಥ್ಯಕ್ಕೆ ಸರಿಯುವಂತಾಗಿದೆ.*

**Keywords:** *ಮೈಸೂರು ಅರಸರು, ಮುಮ್ಮಡಿ ಕೃಷ್ಣರಾಜ ಒಡೆಯರ್, ಗಂಜೀಫಾ ಕಲೆ, ಜಾಗತೀಕರಣ*

**ಪೀಠಿಕೆ**

15ನೇ ಶತಮಾನದಲ್ಲಿ ಪರ್ಶಿಯಾದಲ್ಲಿ ಉಗಮವಾದ ಈ ಕಲೆಯು 13 ಚಡಗಳನ್ನು ಹೊಂದಿದ್ದು, ಪರ್ಶಿಯಾದಲ್ಲಿ 1514–1515ರಲ್ಲಿ ಬಳಸಿರಬಹುದು ಎಂದು ವಿದ್ವಾಂಸನಾದ ಅಭಿಶಿರಾಜ್ ಅಭಿಪ್ರಾಯ ಪಟ್ಟಿದ್ದಾರೆ. ಭಾರತದಲ್ಲಿ ಬಾಬರನ ಕಾಲದಲ್ಲಿ 1527ರಲ್ಲಿ ಬಳಕೆಯಾಗಿದೆ. ಗಂಜೀಫಾ ಎಂಬ ಪದವು ಪರ್ಷಿಯಾದ ಪದವಾಗಿದ್ದು ಖಜಾನೆ, ಕಣಜ, ನಿಧಿ ಎಂಬುದಾಗಿ ಇದೆ. ಮೊದಲು ಈ ಕಲೆಯು ಕ್ರೀಡಾ ರೂಪದಲ್ಲಿ ಅರಮನೆಯ ಸೇವಕರು, ಖಜಾನೆಯ ಅಧಿಕಾರಿಗಳು, ಸೈನ್ಯದ ಸದಸ್ಯರು, ವ್ಯಾಪಾರಸ್ಥರು ಮೊದಲಾಗಿ ಈ ಕಲೆಯನ್ನು ಆರಂಬಿಸಿ ನಂತರದಲ್ಲಿ ರಾಜ್ಯಾದ್ಯಂತ ಹರಡಿ ಭಾರತದಾದ್ಯಂತ ಪಸರಿಸಲಾಯಿತು. ಮುಂದೆ ಈ ಕಲೆಯು ಆಯಾ ಪ್ರಾಂತ್ಯದ ಸಂಸ್ಕೃತಿ, ಪ್ರಾಂತೀಯ ಸಂಪ್ರದಾಯಗಳ ಒಳಗೊಳ್ಳುವಿಕೆಯಿಂದ ಗಂಜೀಫಾ ಕಲೆಯು ತನ್ನ ವೈವಿದ್ಯತೆಗಳಿಂದ ಮೆರೆದಿದೆ.

ಗಂಜೀಫಾ ಕಲೆಯನ್ನು ಹಿಂದೆ ದೇವರ ಆಟ ಎಂದು ಕರೆಯಲಾಗುತ್ತಿತ್ತು. ಗಂಜೀಫಾ ಎಂಬುದು ಇಂದಿನ ಇಸ್ಪೀಟ್ ಆಟವನ್ನು ಹೋಲುತ್ತದೆ. ಈ

**Please cite this article as:** ಕರಿಯಮ್ಮ ಜಿ. ಕೆ. (2024). ಗಂಜೀಫಾ ಕಲೆ ಮತ್ತು ಜಾಗತೀಕರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(2), 194–198

ಆಟದಲ್ಲಿ ಮೂರುವರೆ ಅಂಗುಲ ವ್ಯಾಸವುಳ್ಳ ಗುಂಡನೆಯ ರಟ್ಟಿನ ಒಂದು ಬದಿಯಲ್ಲಿ ಸಾಂಕೇತವಾಗಿ ಚಿತ್ರ ರಚನೆಯಾಗುತ್ತದೆ. ಕಾಗದ, ತೆಳುವಾದ ಮರ, ಚರ್ಮ, ದಂತ, ಮೀನಿನ ಪೊರೆ ಇತ್ಯಾದಿಗಳ ಮೇಲೆಯೂ ಚಿತ್ರರಚಿಸಿ ಗಂಜೀಫದಂತೆ ಬಳಕೆಯಾಗಿದೆ. ಗಂಜೀಫಾ ಎನ್ನುವುದು ಪರ್ಶಿಯನ್ ಪದ. ಗಂಚ್ (ಐಶ್ವರ್ಯ–ಖಜಾನೆ) ಎಂಬ ಪದದಿಂದ ಬಂದಿದೆ. 16ನೇ ಶತಮಾನದಲ್ಲಿ ಭಾರತದಲ್ಲಿ ಗಂಜೀಫಾ ಬಳಕೆಯಾಗಿದ್ದು[1] ಮೊಘಲ್ ದೊರೆಯಾದ ಬಾಬರನು ತನ್ನ ಗೆಳೆಯರಿಗೆ ಪಾರಿತೋಷಕವಾಗಿ ಈ ಗಂಜೀಫಾವನ್ನು ಕಳುಹಿಸುತ್ತಿದ್ದನು. 240 ಎಲೆಗಳನ್ನು ಇರಿಸಿ 20 ಜನರೊಂದಿಗೆ ಆಡುತ್ತಿದ್ದರೆಂದು ತಿಳಿದುಬರುತ್ತದೆ.

ಹದಿನೆಂಟನೇ ಶತಮಾನದಲ್ಲಿ ಕಾಗದದ ಅನ್ವೇಷಣೆಯ ನಂತರ ಕಾಗದದ ತೆಳುವಾದ ಪದರುಗಳನ್ನು ಒಂದಕ್ಕೊಂದು ಮರದ ಅಂಟಿನಿಂದ ಅಂಟಿಸಿ ಪೋಸ್ಟರ್ ಬಣ್ಣಗಳಿಂದ ಕಥೆಯ ಹಂದರಕ್ಕೆ ತಕ್ಕಂತೆ ಗಂಜೀಫಾ ಕಲೆಯನ್ನು ಚಿತ್ರಿಸುತ್ತಾರೆ. ಮೊದಲು ಈ ಕಲೆಗೆ ನೈಸರ್ಗಿಕ ಬಣ್ಣಗಳನ್ನು ಬಳಸುತ್ತಿದ್ದರು. ವೃತ್ತ, ಚೌಕ, ಆಯತ, ದೀರ್ಘ ವೃತ್ತಗಳು ಇವುಗಳ ಪ್ರಮುಖ ಆಕಾರಗಳು. ಹೀಗೆ ಸಿದ್ಧಪಡಿಸಿದ ಚಿತ್ರಗಳನ್ನು ವೃತ್ತಾಕಾರಲ್ಲಿ, ಚೌಕ ಮತ್ತು ಆಯತಗಳಂಥ ಉದ್ದನೆಯ ಫಲಕಗಳಾಗಿ ಸಂಯೋಜಿಸಿರುತ್ತಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಮೇರುಕೃತಿ 'ಶ್ರೀ ತತ್ವನಿಧಿ'. ಇದರಲ್ಲಿ ಗಂಜೀಫಾ ಆಟಗಳ ಸಚಿತ್ರ ವಿವರಗಳಿವೆ. ಗಂಜೀಫಾ ಒಳಾಂಗಣ ಕ್ರೀಡೆಯಾಗಿದ್ದು ಬುದ್ಧಿಯನ್ನು ಚುರುಕುಗೊಳಿಸಲೆಂದು ಈ ಆಟ ಆಡುತ್ತಿದ್ದರು. ಪಶ್ಚಿಮ ಬಂಗಾಳದ ಬಿಷ್ಣುಪುರ್, ಮುರ್ಷಿದಾಬಾದ್, ಕಲ್ಕತ್ತಾದ ಸೋನೇಲ್ ಪುರ್, ರಘುರಾಜ್ ಪುರ, ಪಂಜಕಾಬ್‌ನ ಹೊಶಿಯಾಪುರ್, ರಾಜಾಸ್ತಾನ್‌ನ ಜಯಪುರ್‌ನ ಕರೌಲಿ, ಉದಯ್‌ಪುರ್, ಗುಜರಾತ್‌ನ ಕಾಂಬೆ, ಮಧ್ಯಪ್ರದೇಶದ ಕಾಂಬೆ, ಶಿವಪುರ್, ಬಿಹಾರದ ಪಾಟ್ನಾ, ತೆಲಂಗಾಣದ ನಿರ್ಮಲ್, ಆಂಧ್ರಪ್ರದೇಶದ ಕರ್ನೂಲ್, ಬನಗಾನಪಲ್ಲಿ, ಕಡಪ, ಕರ್ನಾಟಕದ ಮೈಸೂರು, ತಮಿಳುನಾಡಿನ ತಾಂಜಾವೂರು, ಮಹಾರಾಷ್ಟದ ಅಹಮದ್‌ನಗರ, ಸಾವಂತವಾಡಿ, ಹಾಗೂ ಒರಿಸ್ಸಾಗಳಲ್ಲಿ ಈ ಕಲೆ ಹೆಚ್ಚು ಜನಪ್ರಿಯವಾಗಿತ್ತು. ಪ್ರಸ್ತುತ ರಘು ರಾಜಪರ್, ಬಿಷ್ಣುಪುರ್, ಮೈಸೂರ್, ಸಾವಂತ್ ವಾಡಿ, ಮತ್ತು ನಿರ್ಮಲ್ ಪ್ರಾಂತ್ಯಗಳಲ್ಲಿ ಈ ಕಲೆ ಇಂದಿಗೂ ಜೀವಂತವಾಗಿದೆ.

ಗಂಜೀಫಾ ರಟ್ಟುಗಳನ್ನು ಅನೇಕ ದೃಶ್ಯ ನಿರೂಪಣೆಗಳಲ್ಲಿ ಚಿತ್ರಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದುವು ಕೃಷ್ಣಾಷ್ಟ ಮಾಲಾ, ದಶಾವತಾರ, ಅಷ್ಟ ದಿಕ್ಪಾಲ, ಸಪ್ತಮಾತೃಕಾ, ನವಗುಂಜಾರ, ಪರ್ಲಖೇಮುಂಡಿ ರಾಮಾಯಣ, ಸೋನೇಪುರ, ರಾಜ ಕಾರ್ಡ, ಅಷ್ಟಲಕ್ಷ್ಮಿ, ಕೃಷ್ಣ, ನವೀನ ರಾಮ ಚಡಾ, ಕಲ್ಯಾಣ, ಸ್ವಾತಂತ್ರ್ಯ ಸಂಗ್ರಾಮದ ಕಥೆ, ಗಣೇಶ್ ಸೆಟ್, ಅಷ್ಟ ಮಹಿಷಿ ಕೃಷ್ಣ, ಪ್ರಾಣಿಗಳ ಚಿತ್ರ, ಪಕ್ಷಿಗಳ ಚಿತ್ರ, ಸಂಗೀತ ವಾದ್ಯಗಳು, ವಾದ್ಯ ನುಡಿಸುವ ಮಹಿಳೆಯರು, ಸೀತಾ, ರಾಶಿ ಚಕ್ರ, ಅಗ್ನಿ, ಆಟಗಳು ಇತ್ಯಾದಿ. ಈ ಕೆಲಸಕ್ಕೆ ನಿಗಧಿತ ನುರಿತ ಕಲಾವಿದರೇ ಇಂಥಾ ರಟ್ಟುಗಳ ಕಟ್ಟುಗಳನ್ನು ಸಿದ್ದಪಡಿಸುತ್ತಿದ್ದರು. ಕಾಲಕ್ರಮದಲ್ಲಿ ಈ ಕಲೆಯು ಮೈಸೂರು ಸಂಪ್ರದಾಯಿಕ ಶೈಲಿಯಿಂದ ಪ್ರಭಾವಿತವಾಗಿ ಹೊಸ ರೂಪವನ್ನು ತಳೆಯಿತು. ಇವು ಆಟದ ಸಾಧನಗಳಾಗಿದ್ದರೂ ಕಲಾತ್ಮಕವಾಗಿ ಬಹಳ ಆಕರ್ಷಣೆಯಿಂದ ಕೂಡಿದ್ದವು.

ಗಂಜೀಫಾ ಕಲೆಯ ಆಟದ ಪತ್ರ(ರಟ್ಟು)ಗಳ ಕುರಿತು ಲಿಖಿತ ಆಧಾರಗಳು ಸಮರ್ಪಕವಾಗಿ ದೊರೆಯದಿದ್ದರೂ "ಐನ್–ಇ–ಅಕ್ಬರೀ" ಎಂಬ ಪುಸ್ತಕದಲ್ಲಿ ಅಬ್ದುಲ್ ಫಾಝಿಲ್ ಎಂಬ ಕಲಾವಿದನು ಗಂಜೀಫಾ ರಚನಾ ಪ್ರಕಾರಗಳಲ್ಲಿ ಪ್ರಮುಖವಾಗಿ ಹನ್ನೆರಡು ವಿಭಾಗಗಳು ಇವೆ ಎಂದೂ ಈ ಕಲಾ

[1]ಮರಿಶ್ಯಾಮಾಚಾರ್. (2000). *ಕಲಾಕೋಶ.* ಪುಟ. 116.

ಪ್ರಕಾರದ ಮೂಲವು ಪುರಾತನ ಋಷಿ ಮುನಿಗಳಿಂದ ಆದದ್ದು ಎಂದು ಹೇಳುತ್ತಾನೆ. ಮೊಘಲರ ಕಾಲದಲ್ಲಿ ಅಕ್ಬರನ ಆಣತಿಯಂತೆ ರಚಿಸಲ್ಪಟ್ಟ ಬಾಬರ್ ನಾಮಾದಲ್ಲಿ ಈ ಕ್ರೀಡೆಯ ಜನಪ್ರಿಯತೆಯು ಎದ್ದು ಕಾಣುತ್ತದೆ. ಬಾಬರ್ ಪುತ್ರಿ ಬೇಗಂ ಗುಲ್ಬದನ್ ತನ್ನ ಅಣ್ಣನ ನೆನಪಿಗಾಗಿ ಹುಮಯುನ್ ನಾಮಾವನ್ನು ಪ್ರಕಟಿಸಿದ್ದಳು.

**ಗಂಚ್ (ಐಶ್ವರ್ಯ–ಖಜಾನೆ)**

ಸ್ವಲ್ಪಂ ವೃತ್ತ ವಿಚಿತ್ರಮರ್ಥ ಬಹುಳಂ ಎಂದು ವರಹಮಿಹಿರ ಹೇಳಿದಂತೆ, ದೃಷ್ಟಿಯಿಂದ ಸಮಷ್ಟಿಯನ್ನು ಅನ್ವೇಷಿಸಲು, ಅನುಭವಿಸಲು ತವಕಿಸುತ್ತಲೇ ಇರುವುದು ಮಾನವನ ಮನಸ್ಸಿನ ಪ್ರವೃತ್ತಿಯಾಗಿದೆ. ಗಂಜೀಫಾ ಎಲೆಗಳ ಮೂಲಕ ಇಂಥ ಹುಡುಕಾಟದ ಫಲವೇ ಆಗಿದೆ.[2]

ಗಂಜೀಫಾ ಕಲೆಯಲ್ಲಿ ಆಟದ ವಿಧಾನ ಅನುಸರಿಸಿ 96 ರಿಂದ 360 ಎಲೆಗಳವರೆಗೆ ಬೇರೆಬೇರೆ ಎಲೆಗಳುಳ್ಳ ಆಟಗಳಿವೆ. ಅವುಗಳಲ್ಲಿ 16 ಎಲೆಗಳುಳ್ಳ ದಶವತಾರದ ಆಟ ಭಾರತದಾದ್ಯಂತ ಬಳಕೆಯಲ್ಲಿದೆ. ಒಂದೊಂದು ಅವತಾರಕ್ಕೂ ಒಂದೊಂದು ಎಲೆ ಬಳಸಲಾಗಿದೆ. ಹನ್ನೊಂದು ಎಲೆಗಳು ಹಾಗೂ ವಜೀರ (ಮಂತ್ರಿ)ನು ಹತ್ತು ಎಲೆಗಳು ಸೇರಿದ ಈ ಆಟದ ಕಟ್ಟಿನಲ್ಲಿ ರಾಮನಿಗೆ ಬಿಲ್ಲು, ಬಾಣ, ವಾಮನನಿಗೆ ಕಮಂಡಲ ಇತ್ಯಾದಿಗಳಿಂದ ಸಂಕೇತಗೊಂಡಿದೆ. ಕೆಲವೊಮ್ಮೆ ಪೂರ್ಣ ಆಕೃತಿಗಳನ್ನು ರಚಿಸುವುದುಂಟು. ಪೌರಾಣಿಕ ಸಾಮಾಜಿಕ ದೃಶ್ಯಗಳು, ರಾಜರ, ರಾಜಪರಿವಾರದ ಭಾವಚಿತ್ರ, ಹೂವುಗಳಲ್ಲಿ, ಪಶುಪಕ್ಷಿಗಳ, ಅಂಚುಗಳನ್ನು ಕಲಾತ್ಮವಾಗಿ ವಿನ್ಯಾಸ ಗೊಳಿಸಲಾಗುತ್ತದೆ. ಕಿರು ಅಳತೆಯ ಚಿಕಣಿ ಚಿತ್ರಗಳಂತೆ ಇರುವ ಗಂಜೀಫಾಗಳನ್ನು ಸಂಗ್ರಹಿಸುವುದು, ಪ್ರದರ್ಶಿಸುತ್ತಿರುವುದು ಈಚೆಗೆ ಅಧಿಕವಾಗಿದೆ. ಗಂಜೀಫಾ ಕಲೆಯು 16ನೇ ಶತಮಾನದ ಉದ್ದಕ್ಕೂ ಮೊದಲೇ ಭಾರತದಲ್ಲಿ ಇತ್ತೆಂಬುದಕ್ಕೆ ಪೋರ್ಚಗೀಸರ ದಾಖಲೆಗಳು ಉಲ್ಲೇಖಿಸುತ್ತವೆ. 1498ರಲ್ಲಿ ಕ್ರೈಸ್ತಮತ ಪ್ರಚಾರಕ್ಕೆ ಕಲ್ಲಿಕೋಟೆಗೆ ಬಂದ ಸಂತ ಫ್ರಾನ್ಸಿಸ್ ಕ್ಷೇವಿಯರ್ ಕ್ರಿ.ಶ.1516 ರಲ್ಲಿ ತಾನು ನೋಡಿದ ಎಲೆಗಳ ಆಟದ ಕುರಿತು ಬರೆದಿದ್ದಾನೆ.[3] ಸಮುದ್ರಯಾನದ ಮೂಲಕ ಈ ಆಟ ಅರೇಬಿಯಾದಿಂದ ಯುರೋಪಿಗೆ ಹೋಗಿರಬೇಕು. ಮೂಲತಃ ಮಾಂಡಲೀಕರು, ಜಮೀನ್ದಾರರು, ಶ್ರೀಮಂತರು ವಿಲಾಸಕ್ಕಾಗಿ ಆಡುತ್ತಿದ್ದ ಜೂಜಾಟ. ಆದರೆ ಎಲೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಚದುರಂಗದ ಆಟದಂತೆ ಇದು ಬುದ್ಧಿಮತ್ತೆಗೂ ಸವಾಲನ್ನು ಒಡ್ಡುತಿತ್ತು.

ಮೊಘಲರ ಕಾಲದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದ ಈ ಆಟದಲ್ಲಿ ರಾಜಕೀಯ ವಿಚಾರಧಾರೆ, ಪಿತೂರಿ ವ್ಯೂಹ ರಚನೆ, ಷಡ್ಯಂತರಗಳು ಸೂಕ್ಷ್ಮ ರೂಪದಲ್ಲಿ ಸೇರಿದವು. ನಂತರ ಅರಸ, ಸೇನಾಪತಿ, ಮಂತ್ರಿ, ಸೇರಿದರು. ಚದುರಂಗ ಆಟದಂತೆ ರಾಜಕೀಕರಣಗೊಂಡಿತು. ಆದರೆ ಅದರ ಮೂಲತತ್ವವಾದ ದೈವಿಕ ಚೇತನ ಪೂರ್ಣವಾಗಿ ಹೋಗಲಿಲ್ಲ. ರಾಜ ದರ್ಬಾರಿಗೆ ಬರುವುದರೊಂದಿಗೆ ಗಂಜೀಫಾ ಕಲಾವಿದರಿಗೆ ಹೆಚ್ಚಾಗಿ ಪ್ರೋತ್ಸಾಹ ಸಿಗಲಾರಂಭಿಸಿತು. ದರ್ಬಾರಿನಲ್ಲಿ ಹಲವರು ಈ ಆಟಗಳನ್ನು ಕರತಲಾಮಲಕ ಮಾಡಿಕೊಂಡರು. ಸಾಮಾನ್ಯ ಜನರು, ಮಧ್ಯಮ ವರ್ಗದವರೂ ಈ ಆಟ ಆಡತೊಡಗಿದರು. ಒಟ್ಟಾರೆ ಜನ ಸಾಮಾನ್ಯರ ಆಟ ರಾಜ ಮಹಾರಾಜರಲ್ಲಿಯೂ ಬಂತು ಅದರೆ ಕಲೆ ಮಾತ್ರ ಜನಸಾಮಾನ್ಯರಲ್ಲೇ ಉಳಿಯಿತು. ಈ ಕಲೆಯ ಕಲಾವಿದರಿಗೆ ಪೋಷಣೆ ರಾಜರಿಂದ ದೊರೆಯಿತು.

ಮೊಘಲರ ಕಾಲದಲ್ಲಿ ಗಂಜೀಫಾ ಕಲೆಯಲ್ಲಿ ಹಲವು ಹೊಸ ಪ್ರಯೋಗಗಳನ್ನು ಕಂಡಿತು.

[2] ಕರೀಗೌಡ ಬೀಚನಹಳ್ಳಿ. (ಸಂ.) (2000). *ಕರಕುಶಲ ಕಲೆಗಳು ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–2.* ಪುಟ.134–135

[3] ಗುಲ್ವಾಡಿ ಸಂತೋಷ್ ಕುಮಾರ್. (1994). *ಗಂಜೀಫಾ ಕಲೆ.* ಪುಟ. 10

ಭಾರತೀಯ ಮನಸ್ಸು ಮತ್ತು ಪರ್ಶಿಯಾದ ಕಲಾತಂತ್ರ ನೈಪುಣ್ಯ ಚಿಕಣಿ ಚಿತ್ರಕಲೆಯಲ್ಲೂ ಗಂಜೀಫಾ ಎಲೆಯಲ್ಲೂ ಬೆಸೆಯಿತು. ಭಾರತದ್ದೇ ಆದ ಈ ವಿಶಿಷ್ಟ ಕಲೆಯಲ್ಲಿ ದೇವ ದೇವತೆಗಳ ಚಿತ್ರಗಳಿದ್ದ ಕಡೆ ಈಗ ಸೈನ್ಯ, ಆಯುಧ ವಾಹನ ಪಶುಪಕ್ಷಿಗಳೂ ಚಿತ್ರಿತವಾಗಿ ಆಟಿಕೆಗಳಾಗಿ ಬೆಳೆದವು. ಅರಸರ ಖುಷಿಯ ದ್ಯೋತಕವಾಗಿ ನಗ್ನ ಸುಂದರಿಯರ ಚಿತ್ರಗಳು ಸಹಾ ಈ ಎಲೆಗಳಲ್ಲಿ ಮೂಡಿಬಂದವು, ಅದುವರೆಗೆ ಕೇವಲ ದುಂಡು ಆಕಾರದಲ್ಲಿದ್ದ ಗಂಜೀಫಾ ಎಲೆಗಳು ಚೌಕ, ಆಯತ, ಮತ್ತಿತರ ಆಕಾರಗಳಲ್ಲಿ ಬಂದವು. ಎಲೆಗಳ ಕಟ್ಟನ್ನು ಜೋಪಾನವಾಗಿ. ರಕ್ಷಿಸುವದಕ್ಕಾಗಿ ಸುಂದರ, ಆಕರ್ಷಕ ಪೆಟ್ಟಿಗೆಗಳನ್ನು ತಯಾರಿಸಿ, ಆ ಪೆಟ್ಟಿಗೆಗಳ ಮೇಲೂ ಚಿತ್ರರಚನೆ ಮಾಡಿದರು.

ಹಸ್ತಿದಂತ, ಎಲುಬು, ಮುತ್ತಿನಚಿಪ್ಪು, ಆಮೆಚಿಪ್ಪು, ಗಂಧಗಳಿಂದ ಗಂಜೀಫಾಗಳನ್ನು ತಯಾರಿಸುತ್ತಿದ್ದರು. ಅಲ್ಲಾವುದ್ದೀನ್‌ಖಿಲ್ಜಿಯ ಆಸ್ಥಾನ ಕವಿ ಸಂಗೀತಗಾರ ಅಮೀರಖುಸ್ರು ಪರ್ಶಿಯಾದಿಂದ ಕೈಯಲ್ಲೇ ಮಾಡಿದ ಕಾಗದವನ್ನು ಆಮದು ಮಾಡಿಸಿ ಅದರ ಮೇಲೆ ಚಿಕಣಿ ಚಿತ್ರಕಲೆ ರಚಿಸುವುದಕ್ಕಾಗಿ ನಾಂದಿ ಹಾಡಿದನು ಇದರಿಂದ ಕಾಗದದ ಈ ಗಂಜೀಫಾಗಳು ಸಿಗುವಂತಾಯಿತು. ಹಸ್ತಿದಂತ ಮತ್ತು ಶ್ರೀಗಂಧಗಳಿಂದ ಕಾಗದಕ್ಕೆ ಬಂದಾಗ ಅಲ್ಲಿ ಜನಸಾಮಾನ್ಯರ ಮೆಚ್ಚುಗೆಯ ವಿಷಯಗಳೂ ಕಾಣಿಸಿದವು. ಚಡಿಯ, ಪುಷ್ಪ, ಎಲೆ, ಹಣ್ಣು ಇವೆಲ್ಲವೂ ಕಲಾವಿದರ ಕಾರ್ಯಕ್ಷೇತ್ರದ ಕೃತಿಯನ್ನು ವಿಸ್ತರಿಸಿದವು.[4]

ಕನ್ನಡ ಭೋಜ ಎಂದೇ ಹೆಸರಾದ ಮೈಸೂರಿನ ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಸಾಹಿತ್ಯ, ಸಂಗೀತ, ಚಿತ್ರಕಲೆ, ನೃತ್ಯ, ಶಿಲ್ಪ, ಕ್ರೀಡೆ ಎಲ್ಲವೂ ವಿಶಿಷ್ಟವಾಗಿ ವಿಜೃಂಭಿಸಿದವು. ಕರ್ನಾಟಕದ ಕಲಾ ಕೇಂದ್ರಗಳಾಗಿದ್ದ ಮೈಸೂರು, ಶ್ರೀರಂಗಪಟ್ಟಣ, ನಾಗಮಂಗಲ, ನಂಜನಗೂಡು, ಚನ್ನಪಟ್ಟಣ ಮೊದಲಾದ ಕಡೆಗಳಲ್ಲಿ ವಿವಿಧ ಕಲೆಗಳು ಬೆಳೆಯಲು ಅವಕಾಶವಾಯಿತು. ಮುಮ್ಮಡಿ ಕೃಷ್ಣರಾಜರು ಕಡಿಮೆಯೆಂದರೂ ಹತ್ತುಹನ್ನೆರಡು ಆಟಗಳನ್ನು ಹೊಸದಾಗಿ ರೂಪಿಸಿದರು. ಚಾಮಂಡೇಶ್ವರಿ, ಪಂಚ ಪಾಂಡವ, ಜಗನ್ಮೋಹನ, ನವಗ್ರಹ, ನವರತ್ನ, ನವೀನರಾಮ, ಸಾಮ್ರಾಜ್ಯ, ಸದ್ಯೋಜಾತ, ಅಷ್ಟದಿಕ್ಪಾಲ, ದೇವ ದೇವಿಯರ ಸರ್ವಮಂಗಳ, ಅಷ್ಟೇಶ್ವರ ಮನೋಹರ ಮೊದಲಾದ ಪೇಟಗಳನ್ನು ಸೃಷ್ಟಿಸಿ ಆಟವಾಡಿ ಆನಂದಪಟ್ಟರು.

ಇದರ ಶೈಲಿಗಳು ಉತ್ತರ ಭಾರತದಲ್ಲಿ ಪ್ರಾಮುಖ್ಯತೆ ಪಡೆದಿದ್ದ ಈ ಕಲೆಯಲ್ಲಿ ಬಂಗಾಳ, ಒರಿಸ್ಸಾ, ಆಂಧ್ರಪ್ರದೇಶ, ಕಾಶ್ಮೀರ, ಮಹಾರಾಷ್ಟ್ರ ಮತ್ತಿತರ ಸ್ಥಳಗಳಲ್ಲಿ ಈಗಲೂ ಕೇವಲ ಆಟವಾಗಿ ತನ್ನ ಅಸ್ಥಿತ್ವ ಉಳಿಸಿಕೊಂಡಿದೆ.[5]

ಭಾರತದಲ್ಲಿ ಸುಮಾರು 15ಕ್ಕೂ ಹೆಚ್ಚು ಬಗೆಯ ಶೈಲಿಗಳ ಗಂಜೀಫಾ ಕಲೆಯಿತ್ತು. ಆದರೆ ಇಂದು ಮೈಸೂರು ಮತ್ತು ಮಹಾರಾಷ್ಟ್ರ ಗಂಜೀಫಾ ಕಲೆಗಳು ಮಾತ್ರ ಅಲ್ಪಸ್ವಲ್ಪ ಅಸ್ಥಿತ್ವ ಉಳಿಸಿಕೊಂಡಿವೆ. ಉಳಿದವು ಸ್ವಾತಂತ್ರ್ಯನಂತರ ಕ್ರಮೇಣ ಮರೆಯಾಗಿದೆ. ಇಂದು ಹೆಚ್ಚು ಕಡಿಮೆ ಚಿತ್ರಕಲೆಯಾಗಿ, ಕೇವಲ ಪಳೆಯುಳಕೆಯಾಗಿ ಈ ಕಲೆ ಉಳಿದುಕೊಂಡಿದೆ. ಆದರೆ ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಕೆಲಸ ಮಾಡುವ ಚಿತ್ರಕಾರರು ಮಾತ್ರ ತೀರ ವಿರಳರಾಗಿದ್ದಾರೆ. ಅದರಲ್ಲೂ ಜಾಗತೀಕರಣದಿಂದ ನಲುಗುತ್ತಿರುವ ಕರ್ನಾಟಕದ ಈ ಗಂಜೀಫಾ ಚಿತ್ರಕಲೆ ತೀರ ಅಳವಿನಂಚಿಗೆ ಹೋಗಿದೆ. ಆದ್ದರಿಂದ ಅದರ ಪುನರುತ್ಥಾನಕಾರ್ಯ ನಡೆಯಬೇಕಾಗಿದೆ. ಅತ್ಯಂತ ಸೂಕ್ಷ್ಮವಾದ ಮತ್ತು ಸುಂದರವಾದ ಈ ಕಲೆಗೆ ಮಾರುಕಟ್ಟೆ, ಕಲಾವಿದರಿಗೆ ಅಗತ್ಯ ಪ್ರೋತ್ಸಾಹ ಪುರಸ್ಕಾರಗಳು ಪೋಷಣೆಗಳು ದೊರಕಬೇಕು ಇಂತಹ ಕಲೆಯನ್ನು ಉಳಿಸುವ ಪ್ರಯತ್ನ

[4] ಮರಿ ಶ್ಯಾಮಾಚಾರ್. (2007). *ಕಲಾ ಕೋಶ.* ಪುಟ.83.

[5] ಶಿವಶಂಕರ, ಎಮ್.ಎಲ್. (1996). *ಗಂಜೀಫಾ.* ಪುಟ. 2

ಮಾಡಿದಾಗ ಮಾತ್ರ ಈ ಕಲೆ ಮರುಜನ್ಮ ಪಡೆಯುತ್ತದೆ.

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಜಾಗತೀಕರಣ, ಆಧುನೀಕರಣ ಮತ್ತು ತಂತ್ರಜ್ಞಾನದಿಂದ ಆದಂತಹ ವಿವಿಧ ರೀತಿಯ ಬದಲಾವಣೆಗಳು ಈ ಕಲೆಯ ಅಳಿವಿಗೆ ಕಾರಣವಾಗಿದೆ. ಮೈಸೂರು ಒಡೆಯರ ಕಾಲದಲ್ಲಿ ಅತ್ಯಂತ ಮನರಂಜನೆ ಕ್ರೀಡೆಯಾಗಿದ್ದ ಈ ಕಲೆಗೆ ಬೇಡಿಕೆ ಇಲ್ಲದಂತಾಗಿದೆ. ಅತ್ಯಂತ ಕಲಾತ್ಮಕ ಕಲೆಯಾದ ಗಂಜೀಫಾ ಕಲೆಯನ್ನು ಉಳಿಸುವ ಪ್ರಯತ್ನವನ್ನು ಸರ್ಕಾರ ಮತ್ತು ಕಲಾಕಾರರು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಗಂಜೀಫಾ ಕಲೆಯನ್ನು ತಮ್ಮ ವೃತ್ತಿಯನ್ನಾಗಿ ತಮ್ಮ ಹಿಂದಿನ ತಲೆಮಾರುಗಳಿಂದ ಕಲಿತು ಈಗಲೂ ಮುಂದುವರೆಸಿಕೊಂಡು ಹೋಗುತ್ತಿರುವವರಲ್ಲಿ ರಘುಪತಿ ಭಟ್, ಸುಧಾ ವೆಂಕಟೇಶ್, ಚಂದ್ರಿಕಾ ಪ್ರದ್ಮನಾಭ್, ವಿನುತ ಪ್ರಕಾಶ್, ಗಿರಿಜಾ ಕುಮಾರ್, ಆರ್.ಈ.ಸಿಂಗ್, ಜೇ.ಈ. ವಿಠ್ಠಲ್ ರಾವ್, ಮಮತ. ವಿ, ಎಸ್.ಪಿ.ವೀಣಾ, ಡಾ.ಪರಿಮಳ ಲೋಚನ್, ಡಾ. ಅರಿಣಿಮಾ ಪಾಟಿ, ಡಾ. ಎಮ್. ಮುಂದಗೋಳ್, ಬನಮಾರಿ ಮಹಾಪಾತ್ರ, ಸುಭಾಷ್. ಬಿ. ಚಿತಾರಿ, ಸಿತಾಲ್ ಫೌಜೀದಾರ್, ಪಾಪನ್ ಪಾಸ್ ದಾಸ್ ಪ್ರಮುಖರಾಗಿದ್ದಾರೆ[6]. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಇವರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಇತರರು ಕೂಡ ಕಲಿಯುವಂತೆ ಪ್ರೇರೇಪಿಸಲು ಸಹಕಾರ ನೀಡಬೇಕಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಗುಲ್ವಾಡಿ ಸಂತೋಷ್ ಕುಮಾರ್. (1994). *ಗಂಜೀಫಾ ಕಲೆ.* ಕರ್ನಾಟಕ ಲಲಿತ ಕಲಾ ಅಕಾಡೆಮಿ.
- ಕರೀಗೌಡ ಬೀಚನಹಳ್ಳಿ. (ಸಂ.) (2000). ಕರಕುಶಲ ಕಲೆಗಳು. *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–2.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಲಕ್ಷ್ಮಿನಾರಾಯಣ್, ಟಿ. (2021, ಸೆಪ್ಟೆಂಬರ್ 5). ಗಂಜೀಫಾ ಚಿತ್ರಕಲೆಯು ಸಂಪ್ರದಾಯಿಕ ಚಿತ್ರಕಲಾ ಪ್ರಪಂಚದ ಒಂದು ವಿಶಿಷ್ಟವಾದ ಕಲಾ ಕೊಡುಗೆ. ಸಾಹಿತ್ಯ ಮೈತ್ರಿ. https://sahityamaithri.com/
- ಮರಿಶ್ಯಾಮಾಚಾರ್. (2000). *ಕಲಾಕೋಶ.* ಕರ್ನಾಟಕ ಲಲಿತ ಕಲಾ ಅಕಾಡೆಮಿ.
- ಶಿವಶಂಕರ, ಎಮ್.ಎಲ್. (1996). *ಗಂಜೀಫಾ.* ಮೈಸೂರು ಪ್ರಾಚ್ಯ ವಸ್ತು ಸಂಗ್ರಹಾಲಯ ನಿರ್ದೇಶನಾಲಯ.


[6] ಲಕ್ಷ್ಮಿನಾರಾಯಣ್ ಟಿ. (2021, ಸೆಪ್ಟೆಂಬರ್ 5). *ಗಂಜೀಫಾ ಚಿತ್ರಕಲೆಯು ಸಂಪ್ರದಾಯಿಕ ಚಿತ್ರಕಲಾ ಪ್ರಪಂಚದ ಒಂದು ವಿಶಿಷ್ಟವಾದ ಕಲಾ ಕೊಡುಗೆ.* ಪುಟ. ಆನ್‌ಲೈನ್ ಪತ್ರಿಕೆ